‘ಪ್ರಜ್ವಲ್ ಲೈಂಗಿಕ ಹಗರಣ’ ನಾಳೆ ಸಮಾಲೋಚನಾ ಗೋಷ್ಠಿ

ಬೆಂಗಳೂರು, ಮೇ 14: ಹಾಸನ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ಹಗರಣದಲ್ಲಿ ಕಾನೂನಿನ ನಡೆ ಸಡಿಲಗೊಳ್ಳದಂತೆ ಅಪರಾಧಿಗಳು ಶಿಕ್ಷೆಯಿಂದ ತಪ್ಪಿಸಿಕೊಳ್ಳದಂತೆ ಕ್ರಮ ವಹಿಸಬೇಕೆಂದು ಆಗ್ರಹಿಸಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ಮೇ 16ರ ಮಧ್ಯಾಹ್ನ 3ಗಂಟೆಗೆ ನಗರದ ಮಿಷನ್ ರಸ್ತೆಯಲ್ಲಿನ ಸಿಎಸ್‌ಐ ಕಾಂಪೌಂಡ್‌ನಲ್ಲಿರುವ ಸೌಹಾರ್ದ ಸಭಾಂಗಣದಲ್ಲಿ ಸಮಾಲೋಚನಾ ಗೋಷ್ಠಿಯನ್ನು ಏರ್ಪಡಿಸಿದೆ.

ಗೋಷ್ಠಿಯಲ್ಲಿ ಹಿರಿಯ ವಕೀಲ ಸಿ.ಎಚ್.ಹನುಮಂತರಾಯ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ, ವಕೀಲ ಬಿ.ಟಿ.ವೆಂಕಟೇಶ್, ನಿವೃತ್ತ ಪೊಲೀಸ್ ಅಧಿಕಾರಿ ಬಿ.ಕೆ.ಶಿವರಾಂ, ಸಾಹಿತಿ ಪ್ರೊ. ಎಸ್. ಜಿ.ಸಿದ್ದರಾಮಯ್ಯ, ದಸಂಸ ಮುಖಂಡ ಮಾವಳ್ಳಿ ಶಂಕರ್, ಲೇಖಕಿಯರಾದ ಡಾ.ವಿಜಯಾ, ಡಾ.ವಸುಂಧರಾ ಭೂಪತಿ, ಇಂದಿರಾ ಕೃಷ್ಣಪ್ಪ, ಎನ್.ರಾಜಣ್ಣ, ಡಾ.ಕೆ.ಶರೀಫಾ, ಡಾ.ಆರ್.ಪೂರ್ಣಿಮಾ, ಅಕ್ಕೈ ಪದ್ಮಶಾಲಿ, ವಿನಯ್ ಶ್ರೀನಿವಾಸ, ಮಧು ಭೂಷಣ್, ಜ್ಯೋತಿ ಎ., ನೇಮಿಚಂದ್ರ, ಸಿ.ಜೆ.ಮಂಜುಳಾ, ಡಾ.ಎಚ್.ಜಿ. ಜಯಲಕ್ಷ್ಮೀ, ಡಾ.ಬಿ.ಆರ್.ಮಂಜುನಾಥ, ನಿರ್ಮಲಾ, ಲೀಲಾವತಿ ಪಾಲ್ಗೊಳ್ಳಲಿದ್ದಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಡಿಯಲ್ಲಿಯೆ ಪಾಳೆಯಗಾರಿಕೆ ತನ್ನ ಪ್ರಾಬಲ್ಯ ಮೆರೆಯುತ್ತಿರುವುದರ ಉದಾಹರಣೆಯಾಗಿ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯದ ಪ್ರಕರಣ ನಮ್ಮ ಮುಂದಿವೆ. ಮಹಿಳೆಯರ ಘನತೆಯ ಬದುಕಿನ ಹಕ್ಕನ್ನು ಕಸಿಯಲಾರದಂತೆ, ಅಪರಾಧಿಗಳು ಶಿಕ್ಷೆಯಿಂದ ತಪ್ಪಿಸಿಕೊಳ್ಳದಂತೆ ಸಮಾಜ ಎಚ್ಚರ ವಹಿಸಬೇಕು ಎಂದು ಪ್ರಕಟನೆ ತಿಳಿಸಿದೆ.

ವೇತನ ನೀಡದ ಆರೋಪ: ಬಿಎಂಟಿಸಿ ಬಸ್ ಚಾಲಕರ ಧರಣಿ

ಬೆಂಗಳೂರು, ಮೇ 14: ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಬಿಎಂಟಿಸಿ ಇಲೆಕ್ಟ್ರಿಕ್ ಬಸ್ ಚಾಲಕರಿಗೆ ಸರಿಯಾಗಿ ವೇತನ ನೀಡುತ್ತಿಲ್ಲ ಎಂದು ಆರೋಪಿಸಿ ಬೆಂಗಳೂರಿನ ಶಾಂತಿನಗರ ಡಿಪೋ-3ರ ಮುಂದೆ ಮಂಗಳವಾರ ಚಾಲಕರು ಧರಣಿ ನಡೆಸಿದ್ದಾರೆ.

ಮೊದಲಿಗೆ ಗುತ್ತಿಗೆ ಆಧಾರದಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳುವಾಗ ಟಾಟಾ ಕಂಪೆನಿಯಲ್ಲಿ ಕೆಲಸ ಎಂದು ಹೇಳಿದ್ದರು. ಇದೀಗ, ಆರ್ಯ ಕಂಪೆನಿಯಲ್ಲಿ ಕೆಲಸ ನೀಡಿದ್ದಾರೆ. ಅಲ್ಲದೇ, ತಿಂಗಳಿಗೆ 26 ಸಾವಿರ ರೂ. ವೇತನ ನೀಡುತ್ತೇವೆ ಎಂದಿದ್ದರು. ಆದರೀಗ, ಕೇವಲ 18 ಸಾವಿರ ರೂ. ನೀಡುತ್ತಿದ್ದಾರೆ. ಬರುವ ವೇತನದಲ್ಲಿ ಕಡಿತ ಮಾಡುತ್ತಿರುವ ಹಣ ಪಿಎಫ್ ಖಾತೆಗೂ ಜಮೆ ಆಗುತ್ತಿಲ್ಲ. ವಸತಿ ಸೌಲಭ್ಯ ನೀಡುತ್ತೇವೆ ಎಂದಿದ್ದರು. ಇದೀಗ ಅದೂ ಇಲ್ಲ ಎಂದು ಚಾಲಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಮಗೆ ಸರಿಯಾಗಿ ತಿಂಗಳಿಗೆ ವೇತನ ಆಗುತ್ತಿಲ್ಲ. ಜತೆಗೆ ನಾವು ಕೆಲಸ ಮತ್ತು ಓಟಿ ಸೇರಿ ತಿಂಗಳಲ್ಲಿ 40-42 ಸಾವಿರ ರೂ.ವರೆಗೆ ದುಡಿಯುತ್ತಿದ್ದೇವೆ. ಆದರೆ, ನಮಗೆ ಸುಮಾರು 42 ಸಾವಿರ ರೂ. ಕೊಡುವ ಬದಲಿಗೆ ಕೇವಲ 18-20 ಸಾವಿರ ರೂಪಾಯಿ ಮಾತ್ರ ಕೊಟ್ಟಿದ್ದಾರೆ. ಈ ಪುರುಷಾರ್ಥಕ್ಕೆ ನಾವು ಕೆಲಸ ಏಕೆ ಮಾಡಬೇಕು ಎಂದು ಚಾಲಕರು ಪ್ರಶ್ನಿಸಿದ್ದಾರೆ.

ಬಿಎಂಟಿಸಿಯಲ್ಲಿ 6,842 ಬಸ್‌ಗಳಿವೆ. ಅದರಲ್ಲಿ ಸಾಮಾನ್ಯ 5,642 ಬಸ್‌ಗಳಿದ್ದರೆ, 600 ಎಸಿ ಬಸ್‌ಗಳಿವೆ. 600ಕ್ಕೂ ಹೆಚ್ಚು ಇಲೆಕ್ಟ್ರಿಕ್ ಬಸ್‌ಗಳಿವೆ. ಡಿಪೋ-3 ಒಂದರಲ್ಲೇ 113 ಇಲೆಕ್ಟ್ರಿಕ್ ಬಸ್‌ಗಳು ಸಂಚರಿಸುತ್ತವೆ. ಇಲ್ಲಿ 3 ಶಿಫ್ಟ್‌ಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದೇವೆ. ಆದರೆ, ವೇತನ ಮಾತ್ರ ಸಿಗುತ್ತಿಲ್ಲ ಎಂದು ಚಾಲಕರು ಬೇಸರ ವ್ಯಕ್ತಪಡಿಸಿದ್ದಾರೆ.

‘ಬೆಳೆ ಪರಿಹಾರ ಹಣ ಜಮೆಯಾಗದೆ ಇರುವ ರೈತರಿಗೆ ಸಹಾಯವಾಣಿ’

ಕಲಬುರಗಿ, ಮೇ 14: 2023-24ನೇ ಸಾಲಿನಲ್ಲಿ ಕಲಬುರಗಿ ಜಿಲ್ಲೆಯ ಎಲ್ಲ ತಾಲೂಕುಗಳನ್ನು ತೀವ್ರ ಬರಪೀಡಿತ ತಾಲೂಕುಗಳೆಂದು ಘೋಷಣೆ ಮಾಡಿರುವ ಹಿನ್ನೆಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ಹಾನಿಯಾಗಿರುವ ಬೆಳೆಗಳಿಗೆ ಬೆಳೆ ಸಮೀಕ್ಷೆ ದತ್ತಾಂಶದ ಮಾಹಿತಿಯ ಆಧಾರದ ಮೇರೆಗೆ ಫ್ರೂಟ್ಸ್ ಐಡಿ ಹೊಂದಿರುವ ಹಾಗೂ ಪಹಣಿ ಜೋಡಣೆಯಾಗಿರುವ ರೈತರ ಖಾತೆಗೆ ಎಸ್‌ಡಿಆರ್‌ಎಫ್ ಮಾರ್ಗಸೂಚಿ ಅನ್ವಯ ಡಿಬಿಟಿ ಮೂಲಕ ಪರಿಹಾರ ಜಮೆ ಮಾಡಲಾಗಿದೆ ಎಂದು ಸೇಡಂ ತಾಲೂಕು ತಹಶೀಲ್ದಾರ್ ತಿಳಿಸಿದ್ದಾರೆ.

ಇನ್ನು ಕೆಲವು ರೈತರ ಬೆಳೆ ಹಾನಿ ಪರಿಹಾರ ಹಣ ಖಾತೆಗೆ ಜಮೆ ಆಗದೇ ಇರುವ ಹಿನ್ನೆಲೆಯಲ್ಲಿ ರೈತರು ಹೆಚ್ಚಿನ ಮಾಹಿತಿ ಪಡೆದುಕೊಳ್ಳಲು ಅನುಕೂಲವಾಗುವಂತೆ ಸೇಡಂ ತಾಲೂಕಿನ ತಹಶೀಲ್ದಾರ್ ಕಚೇರಿಯಲ್ಲಿ ಸಹಾಯವಾಣಿ ತೆರೆಯಲಾಗಿದ್ದು, ಈ ಸಹಾಯವಾಣಿ ಕೇಂದ್ರದ ದೂರವಾಣಿ ಸಂಖ್ಯೆಯನ್ನು ಕಚೇರಿ ಕೆಲಸದ ಅವಧಿಯಲ್ಲಿ ಸಂಪರ್ಕಿಸಿ ಪರಿಹಾರ ಕಂಡುಕೊಳ್ಳಬಹುದಾಗಿದೆ.

ಸಹಾಯವಾಣಿ ಸಂಖ್ಯೆ: ಸೇಡಂ ತಹಶೀಲ್ದಾರ್ ಕಚೇರಿಯಲ್ಲಿನ ಸಹಾಯವಾಣಿ ಸಂಖ್ಯೆ **97416 80444, 94493 09308, 94487 86422** ಹಾಗೂ **08441-276184** ಇರುತ್ತದೆ.

ಫ್ರೂಟ್ಸ್ ನೋಂದಣಿ ಕಡ್ಡಾಯ: ಬೆಳೆಹಾನಿ ಪರಿಹಾರ ಪಡೆದುಕೊಳ್ಳಲು ಫ್ರೂಟ್ಸ್ ಐಡಿಗೆ ಪಹಣಿ ಜೋಡಣೆ ಕಡ್ಡಾಯವಾಗಿರುವುದರಿಂದ ಇದುವರೆಗೂ ಫ್ರೂಟ್ಸ್ ಐಡಿ ನೋಂದಣಿ ಮಾಡಿಕೊಳ್ಳದ ರೈತರು ತಮ್ಮ ಆಧಾರ್, ಪಹಣಿ ಹಾಗೂ ಬ್ಯಾಂಕ್ ಪಾಸ್‌ಬುಕ್ ದಾಖಲೆಗಳೊಂದಿಗೆ ತಮ್ಮ ಹತ್ತಿರದ ಕಂದಾಯ, ಕೃಷಿ ಅಥವಾ ತೋಟಗಾರಿಕಾ ಇಲಾಖೆಯ ಕಚೇರಿಗಳಿಗೆ ಭೇಟಿ ನೀಡಿ ತಪ್ಪದೇ ನೋಂದಣಿ ಮಾಡಿಕೊಳ್ಳಬೇಕು. ಇಲ್ಲವಾದ್ದಲ್ಲಿ ಅಂತಹ ರೈತರು ಪರಿಹಾರಕ್ಕೆ ಅರ್ಹರಾಗುವುದಿಲ್ಲವೆಂದು ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಮೇ 24ರಿಂದ ‘ಮಾವು, ಹಲಸು ಮೇಳ’

ಬೆಂಗಳೂರು, ಮೇ 14: ಲಾಲ್‌ಬಾಗ್‌ನಲ್ಲಿ ಮೇ 24ರಿಂದ ಜೂ.10ರ ವರೆಗೆ ‘ಮಾವು ಮತ್ತು ಹಲಸು ಮೇಳ’ ನಡೆಯಲಿದೆ ಎಂದು ರಾಜ್ಯ ಮಾವು ಅಭಿವೃದ್ಧಿ ಮಾರುಕಟ್ಟೆ ನಿಗಮದ ಅಧ್ಯಕ್ಷ ಸಿ.ಜಿ. ನಾಗರಾಜ್ ತಿಳಿಸಿದ್ದಾರೆ.

ಮಂಗಳವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಈ ಮೇಳದಲ್ಲಿ ಕೊಪ್ಪಳದ ಕೇಸರ್, ಚಿತ್ರದುರ್ಗ ಮತ್ತು ತುಮಕೂರಿನ ಬಾದಾಮಿ, ರಸಪುರಿ, ಬೆನಿಶಾ, ಮಲಗೋವಾ, ಇಮಾಮ್ ಪಸಂದ್ ಸೇರಿದಂತೆ ವಿವಿಧ ಪ್ರಸಿದ್ಧ ತಳಿಗಳು ಮಾವಿನಹಣ್ಣುಗಳು ಲಭ್ಯವಿರುತ್ತವೆ. ಕೋಲಾರ, ರಾಮನಗರ, ಚಿಕ್ಕಬಳ್ಳಾಪುರ, ಮಂಡ್ಯ ಮತ್ತು ಬೆಂ.ಗ್ರಾಮಾಂತರ ಜಿಲ್ಲೆಗಳ ರೈತರು ರಸಪುರಿ ಮತ್ತು ತೋತಾಪುರಿಯಂತಹ ತಳಿಯ ಹಣ್ಣುಗಳನ್ನು ಮಾರಾಟ ಮೇಳಕ್ಕೆ ತರಲಿದ್ದಾರೆ ಎಂದು ಮಾಹಿತಿ ನೀಡಿದರು.

ಈ ಬಾರಿ ಮಾವು ಇಳುವರಿ ಪ್ರಯಾಣ ಕುಸಿದಿದೆ. ಹೀಗಾಗಿ ಮಾವಿನ ಹಣ್ಣುಗಳನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡುವುದಿಲ್ಲ ಎಂದು ಮಾವು ಅಭಿವೃದ್ಧಿ ಮಂಡಳಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

4 ವರ್ಷಗಳಲ್ಲಿ ನಗರದ 185 ಕೆರೆಗಳ ಪುನರುಜ್ಜೀವನ

ಪ್ರೀತಿ ಗೆಹ್ಲೋಟ್

ಬೆಂಗಳೂರು, ಮೇ 14: ನಾಲ್ಕು ವರ್ಷಗಳಿಂದ ಬೆಂಗಳೂರು ನಗರದ ವ್ಯಾಪ್ತಿಯಲ್ಲಿನ 185 ಕೆರೆಗಳನ್ನು ಪುನರುಜ್ಜೀವನಗೊಳಿಸುವ ಗುರಿಯನ್ನು ಬಿಬಿಎಂಪಿ ಹೊಂದಿದೆ ಎಂದು ಬಿಬಿಎಂಪಿ ಆಯುಕ್ತೆ ಪ್ರೀತಿ ಗೆಹ್ಲೋಟ್ ಹೇಳಿದ್ದಾರೆ.

ಮಂಗಳವಾರ ನಗರದ ಚೇಂಬರ್ ಆಫ್ ಕಾಮರ್ಸ್ ಆಯೋಜಿಸಿದ್ದ 'ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ' ವೆಬಿನಾರ್‌ನಲ್ಲಿ ಮಾತನಾಡಿದ ಅವರು, ಬಿಬಿಎಂಪಿ ವ್ಯಾಪ್ತಿಯಲ್ಲಿ 202 ಕೆರೆಗಳಿವೆ. ಉಳಿದ 17 ಕೆರೆಗಳನ್ನು ಮಿತಿ ಮೀರಿ ಒತ್ತುವರಿಯಾಗಿದ್ದು, ಅವುಗಳನ್ನು ಪುನರುಜ್ಜೀವನ ಗೊಳಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಒತ್ತುವರಿ, ಚರಂಡಿ ನೀರು ಹರಿಸುವುದು, ಘನತ್ಯಾಜ್ಯ ಸುರಿಯುವುದು ಸೇರಿದಂತೆ ಹಲವು ಸವಾಲುಗಳನ್ನು ಎದುರಿಸುತ್ತಿದ್ದೇವೆ. ಕೆಲವು ಪ್ರಕರಣಗಳಲ್ಲಿ ರಾಸಾಯನಿಕಗಳನ್ನು ಕರೆಗಳಿಗೆ ಹರಿಸಲಾಗುತ್ತಿದೆ. ಈ ಅಂಶಗಳ ಜೊತೆಗೆ ಸಾಕಷ್ಟು ಹಣಕಾಸಿನ ನೆರವು ಇಲ್ಲದಿರುವುದು, ಸಿಬ್ಬಂದಿ ಮತ್ತು ಇಲಾಖೆಗಳ ನಡುವಿನ ಸಮನ್ವಯದ ಕೊರತೆಯಿಂದ ಕಾಲಮಿತಿಯಲ್ಲಿ ಕೆರೆಗಳ ಪುನರುಜ್ಜೀವನ ಸಾಧ್ಯವಾಗಿಲ್ಲ ಎಂದು ಅವರು ಹೇಳಿದರು.

ತಾಂತ್ರಿಕ ಜ್ಞಾನದ ಕೊರತೆಯ ಜೊತೆಗೆ ಭೂಮಿಯ ತಾಂತ್ರಿಕ ವಿಷಯಗಳ ಅರಿವು ಇಲ್ಲದಿರುವುದು ಕೆರೆ ಪುನರುಜ್ಜೀವನ ಕಾರ್ಯಗಳಲ್ಲಿ ವಿಳಂಬವಾಗಿದೆ. ಬಿಬಿಎಂಪಿ ಸಮುದಾಯ ತೊಡಗಿಸಿದ ಕೆರೆ ಸಂರಕ್ಷಣಾ ನೀತಿ-2024 ಅನ್ನು ಹೈಕೋರ್ಟ್‌ಗೆ ಸಲ್ಲಿಸಿದ್ದು, ಒಪ್ಪಿಗೆ ದೊರೆತ ಕೂಡಲೇ ಈ ಕುರಿತು ವಿವರ ಬಹಿರಂಗಪಡಿಸಲಾಗುವುದು ಎಂದು ಪ್ರೀತಿ ಗೆಹ್ಲೋಟ್ ಹೇಳಿದರು.

ಹೈಕೋರ್ಟ್ ಒಪ್ಪಿಗೆಗಾಗಿ ಕಾದಿದ್ದೇವೆ. ಕಾರ್ಪೊರೇಟ್ ಸಂಸ್ಥೆಗಳು, ವೈಯಕ್ತಿಕ ಸಂಘ-ಸಂಸ್ಥೆಗಳು ಅಥವಾ ನಿವಾಸಿಗಳ ಕಲ್ಯಾಣ ಸಂಘಗಳು ಮುಂದೆ ಬಂದು ನಗರದಲ್ಲಿನ ಕೆರೆಗಳ ನಿರ್ವಹಣೆ, ಸಂರಕ್ಷಣೆ ಮತ್ತು ಪುನರುಜ್ಜೀವನ ಕಾರ್ಯದಲ್ಲಿ ಕೊಡುಗೆ ನೀಡುವ ಪ್ರಸ್ತಾವಗಳನ್ನು ಆಹ್ವಾನಿಸುತ್ತಿದ್ದೇವೆ ಎಂದು ಅವರು ಹೇಳಿದರು.

> “ಕೆರೆಗಳು ಕೇವಲ ಜಲಮೂಲಗಳು ಮಾತ್ರವಲ್ಲದೆ, ನಮ್ಮ ಜೀವನಾಡಿಗಳಾಗಿವೆ. ಕೆರೆಗಳ ಸಂರಕ್ಷಣೆಗೆ ಆದ್ಯತೆ ನೀಡಬೇಕು. ಸರಕಾರ, ನಾಗರಿಕರ ಸಮೂಹಗಳು ಒಗ್ಗೂಡಿ ಕೆರೆಗಳ ಪುನರುಜ್ಜೀವನಕ್ಕೆ ಆದ್ಯೆ ವಹಿಸಬೇಕು'
> -ಜಿ.ವಿ.ರಾವ್,
> ಬಿಸಿಐಸಿಯ ಪರಿಣಿತರ ಸಮಿತಿ ಅಧ್ಯಕ್ಷ

ಕೇವಲ ಸುಂದರವಾಗಿಸುವುದಕ್ಕೆ ಮಾತ್ರ ಆದ್ಯತೆ ಇರುವುದಿಲ್ಲ. ಹಣದ ನೆರವು ಕುರಿತ ಪ್ರಸ್ತಾವಗಳು ಸ್ಪಷ್ಟತೆ ಹೊಂದಿರಬೇಕು. ಪರೀಕ್ಷಾ ಪ್ರಕ್ರಿಯೆಯನ್ನು ಆರಂಭಿಸುವುದಕ್ಕಾಗಿ ತಂತ್ರಜ್ಞಾನ ತಂಡದ ಬೆಂಬಲವನ್ನು ಹೊಂದಿರಬೇಕು. ಸಂಪೂರ್ಣವಾಗಿ ಅನುಷ್ಠಾನದ ಮೇಲೆ ಗಮನ ಕೇಂದ್ರೀಕರಿಸುತ್ತೇವೆ. ಮುಂದಿನ 3-4 ತಿಂಗಳ ಒಳಗೆ ಪಾಲುದಾರರ ಜೊತೆಗೆ ಸೂಕ್ತ ಯೋಜನೆಯೊಂದಿಗೆ ಕೆರೆಗಳ ಮೂಲಕ ನೀರಿನ ಬಿಕ್ಕಟ್ಟನ್ನು ಪರಿಹರಿಸುತ್ತೇವೆ ಎಂದು ಗೆಹ್ಲೋಟ್ ಹೇಳಿದರು.

ಬಿಜೆಪಿ ನಾಯಕರನ್ನು ಮಲ್ಲಪ್ಪ ಶೆಟ್ಟಿಗೆ ಹೋಲಿಸಬಹುದು: ಕಾಂಗ್ರೆಸ್

ಬೆಂಗಳೂರು, ಮೇ 14: ಕರ್ನಾಟಕದ ಸರಕಾರವನ್ನು ಉರುಳಿಸಲು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆಯವರ ಸಹಕಾರ ಕೋರಿರುವ ಕರ್ನಾಟಕದ ಬಿಜೆಪಿ ನಾಯಕರನ್ನು ಕಿತ್ತೂರು ರಾಣಿ ಚೆನ್ನಮ್ಮನ ಬೆನ್ನಿಗೆ ಚೂರಿ ಹಾಕಿದ ಮಲ್ಲಪ್ಪ ಶೆಟ್ಟಿಗೆ ಹೋಲಿಸಬಹುದು ಎಂದು ಕಾಂಗ್ರೆಸ್ ಹೇಳಿದೆ.

ಮಂಗಳವಾರ ಎಕ್ಸ್ ಜಾಲತಾಣದಲ್ಲಿ ಪೋಸ್ಟ್ ಹಾಕಿರುವ ಕಾಂಗ್ರೆಸ್, ಏಕನಾಥ ಶಿಂದೆ ಅವರೇ, ಈ ಸರಕಾರ ಕನ್ನಡಿಗರ ಸ್ವಾಭಿಮಾನದ ಸರಕಾರ, ಕನ್ನಡಿಗರ ಆಶೀರ್ವಾದದ ಸರಕಾರ, ಕನ್ನಡಿಗರ ಪ್ರೀತಿಯ ಸರಕಾರ. ಕನ್ನಡಿಗರ ತಂಟೆಗೆ ಬರುವ ಮುನ್ನ ವೀರ ರಾಣಿ ಬೆಳವಡಿ ಮಲ್ಲಮ್ಮರನ್ನು ಒಮ್ಮೆ ನೆನಪು ಮಾಡಿಕೊಳ್ಳಿ ಎಂದು ತಿರುಗೇಟು ನೀಡಿದೆ.

ಕಾಂಗ್ರೆಸ್ ಸರಕಾರವನ್ನು ಬೀಳಿಸುತ್ತೇವೆ ಎನ್ನುವುದು ಬಿಜೆಪಿಗರ ಹಗಲುಗನಸು. ಈ ಲೋಕಸಭಾ ಚುನಾವಣೆಯ ಫಲಿತಾಂಶದ ನಂತರ ಬೀಳುವುದು ಕಾಂಗ್ರೆಸ್ ಸರಕಾರವಲ್ಲ, ನರೇಂದ್ರ ಮೋದಿಯವರ ಸರಕಾರ. ಈ ಚುನಾವಣೆಯ ನಂತರ ಅಪಾಯವಿರುವುದು ಬಿಜೆಪಿಯ ವಿರೋಧ ಪಕ್ಷದ ನಾಯಕನ ಕುರ್ಚಿಗೆ ಹೊರತು ಕಾಂಗ್ರೆಸಿಗಲ್ಲ ಎಂದು ಕಾಂಗ್ರೆಸ್ ಹೇಳಿದೆ.

ಈ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಶೂನ್ಯ ಸಾಧನೆ ಮಾಡುವ ರಾಜ್ಯ ಬಿಜೆಪಿ ನಾಯಕರು ತಮ್ಮ ಹೈಕಮಾಂಡ್ ನಾಯಕರ ಉಗ್ರಾವತಾರದ ಕೋಪವನ್ನು ಎದುರಿಸಲು ಸಜ್ಜಾಗಲಿ ಎಂದು ಕಾಂಗ್ರೆಸ್ ಎಚ್ಚರಿಸಿದೆ.

ಸರಕಾರಿ ಕಚೇರಿಯಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು ಜಿಲ್ಲಾಧಿಕಾರಿ ಸೂಚನೆ

ಕಲಬುರಗಿ, ಮೇ 14: ಸರಕಾರಿ ಕಚೇರಿಗೆ ದೈನಂದಿನ ಕೆಲಸಕ್ಕೆ ಬರುವ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ, ವಿಶೇಷಚೇತನರಿಗೆ ಅನುಕೂಲವಾಗುವಂತೆ ರ್‍ಯಾಂಪ್ ವ್ಯವಸ್ಥೆ ಸೇರಿದಂತೆ ಅವಕಾಶವಿದ್ದಲ್ಲಿ ಆಸನದ ವ್ಯವಸ್ಥೆ ಕಲ್ಪಿಸುವ ಮೂಲಕ ಜನಸ್ನೇಹಿ ಆಡಳಿತಕ್ಕೆ ಒತ್ತು ನೀಡಬೇಕೆಂದು ಜಿಲ್ಲಾಧಿಕಾರಿ ಬಿ.ಫೌಝಿಯಾ ತರನ್ನುಮ್ ಎಲ್ಲ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಸರಕಾರಿ ಕಚೇರಿಯಲ್ಲಿ ಮೂಲ ಸೌಕರ್ಯ ಕಲ್ಪಿಸುತ್ತಿಲ್ಲವೆಂದು ಸಿಎಂ ಕಚೇರಿಗೆ ಸಾರ್ವಜನಿಕರಿಂದ ದೂರು ಸಲ್ಲಿಕೆಯಾಗುತ್ತಿದ್ದು, ಎಲ್ಲ ಸರಕಾರಿ, ಅರೆ ಸರಕಾರಿ ಕಚೇರಿಗಳಲ್ಲಿ ಕಚೇರಿ ಆವರಣ ಸ್ವಚ್ಛತೆಯೊಂದಿಗೆ ಮೂಲಭೂತ ಸೌಕರ್ಯ ಕಲ್ಪಿಸಬೇಕೆಂದು ಎಲ್ಲ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಅವರು ನಿರ್ದೇಶನ ನೀಡಿದ್ದಾರೆ ಎಂದು ಪ್ರಕಟನೆ ತಿಳಿಸಿದೆ.

CHANGE OF NAME

I, **AQIB SHUHAIB** R/at No.39/10, Bazar Street Cross, Behind SRK Convetion Center Neelasandra Bengaluru-560047 have changed my minor Son's name from **AAHIL ALI KHAN** to **MOHAMMED AAHIL ALI KHAN** vide affidavit dated: 13/05/2024 Before Notary **Mohammed Hussain .K** Bangalore.

MOTILAL OSWAL HOME LOANS

ಮೋತಿಲಾಲ್ ಓಸ್ವಾಲ್ ಹೋಮ್ ಫೈನಾನ್ಸ್ ಅಮಿಟೆಡ್

CIN - U65923MH2013PLC248741

ನೋಂದಾಯಿತ ಕಚೇರಿ: ಮೋತಿಲಾಲ್ ಓಸ್ವಾಲ್ ಟವರ್, ರಹೀಮ್ತುಲ್ಲಾ ಸಯಾನಿ ರಸ್ತೆ, ಎದುರು ಪರೇಲ್ ಎಸ್.ಟಿ. ಡಿಪೋ, ಪ್ರಭಾದೇವಿ, ಮುಂಬೈ - 400 025, ಸಿ.ಎಸ್: 022 6889 9999

Website: www.motilaloswalhf.com, Email: hfquery@motilaloswal.com

ಸಾರ್ವಜನಿಕ ನೋಟೀಸ್

'ಮೋತಿಲಾಲ್ ಓಸ್ವಾಲ್ ಹೋಮ್ ಫೈನಾನ್ಸ್ ಅಮಿಟೆಡ್' (MOHFL), ನ್ಯಾಷನಲ್ ಹೌಸಿಂಗ್ ಬ್ಯಾಂಕ್ (NHB)ನಲ್ಲಿ ನೋಂದಾಯಿಸಲಾದ ಹೌಸಿಂಗ್ ಫೈನಾನ್ಸ್ ಕಂಪನಿ ನೋಂದಾಯಿತ ಕಚೇರಿ: ಮೋತಿಲಾಲ್ ಓಸ್ವಾಲ್ ಟವರ್, ರಹೀಮ್ತುಲ್ಲಾ ಸಯಾನಿ ರಸ್ತೆ, ಪರೇಲ್ ಎಸ್ಟಿ ಡಿಪೋ ಎದುರು, ಪ್ರಭಾದೇವಿ, ಮುಂಬೈ-400 025 ಹೊಂದಿದೆ. ಇದರ ಶಾಖೆಯ ಕಚೇರಿ ನಂ.212, 3ನೇ ಮಹಡಿ, ಹೀರೋ ಹೋಂಡಾ ಶೋರೂಂ ಮೇಲ್ಭಾಗ, ಪ್ಯಾಲೇಸ್ ಆರ್ಕಿಡ್, ಬಳ್ಳಾರಿ ರಸ್ತೆ, ಸದಾಶಿವ ನಗರ, ಬೆಂಗಳೂರು-560080, ಕರ್ನಾಟಕದಿಂದ ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಅಮಿಟೆಡ್, ನಂ.26 ಕ್ರೆಸೆಂಟ್ ರಸ್ತೆ, ಕರ್ನಾಟಕ ಫಿಲ್ಮ್ ಚೇಂಬರ್ಸ್ ಅಸೋಸಿಯೇಷನ್ ಎದುರು, ಬೆಂಗಳೂರು-560001 ಗೆ ಆಗಸ್ಟ್ 30, 2024ರಿಂದ ಸ್ಥಳಾಂತರಿಸಲು ಉದ್ದೇಶಿಸಿದೆ ಎಂದು ಸಾರ್ವಜನಿಕರಿಗೆ ಈ ಮೂಲಕ ನೋಟೀಸ್ ನೀಡಲಾಗಿದೆ.

ಸ್ಥಳಾಂತರಗೊಂಡ ಸ್ಥಳದಿಂದ ಸೇವೆ ಪಡೆದ ಗ್ರಾಹಕರಿಗೆ ಹೊಸ ಸ್ಥಳದಿಂದ ಸೇವೆ ನೀಡಲಾಗುವುದು. ಸಂಬಂಧಪಟ್ಟವರೆಲ್ಲರೂ ಇದನ್ನು ಗಮನಿಸಬೇಕೆಂದು ವಿನಂತಿಸಲಾಗಿದೆ.

ಸ್ಥಳ: ಮುಂಬೈ
ದಿನಾಂಕ : 15.05.2024
*ಅನುವಾದದಲ್ಲಿ ವ್ಯತ್ಯಾಸ ಕಂಡುಬಂದಲ್ಲಿ, ಇಂಗ್ಲಿಷ್ ಆವೃತ್ತಿಯು ಪ್ರಾಮಾಣಿಕವಾಗಿರುತ್ತದೆ.

ಮೋತಿಲಾಲ್ ಓಸ್ವಾಲ್ ಹೋಮ್ ಫೈನಾನ್ಸ್ ಅಮಿಟೆಡ್ ಪರವಾಗಿ
ಸಹಿ/-
ಅಧಿಕೃತ ಅಧಿಕಾರಿ

NOTICE

INGERSOLL-RAND (INDIA) LTD

Registered Office: 1st Floor, Subramanya Arcade, No.